**V.M.V.V.Sangha's**
**Vijaya MahanteshaKrupaposhit**

# S.R.Vastrad Arts, Science and V.S.Bellihal Commerce College, Hungund – 587118




**3.4.3.1 Number of extension and outreach Programs conducted in collaboration with industry, community, and Non- Government Organizations through NSS/ NCC/ Red Cross/ YRC etc., year**

# EXTENSION AND OUTREACH PROGRAMS
## 2022-23
# Activity- 07

| **Name of the Event Organized** | **Awareness Programme** |
|---|---|
| Title of the Event | **NSS Camp** |
| Date of the Event Organized | 05-08-2023 to 11-08-2023 |
| Place of Event | Chittawadagi |
| Name of the Expert with Designation | Shri Shambhugouda Patil |
| Objectives of the Event | To develop intuition of Service, Cooperation and unity. |
| Outcome of the Event | Unity, sacrificial and cooperation qualities are observed on the behavior. |








ಪ್ರಜಾವಾಣಿ

# ವಿದ್ಯಾರ್ಥಿಗಳಿಗೆ ಓದಿನಲ್ಲಿ ಏಕಾಗ್ರತೆ ಇರಲಿ

## ಎನ್‌ಎಸ್‌ಎಸ್ ವಾರ್ಷಿಕ ಶಿಬಿರದಲ್ಲಿ ಲೆಫ್ಟಿನೆಂಟ್ ಎಸ್.ಬಿ.ಚಳಗೇರಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಹುನಗುಂದ: ಕಠಿಣ ಪರಿಶ್ರಮದಿಂದ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯ. ಸಾಧನೆಗೆ ಅಸಾಧ್ಯವಾದದ್ದು, ಯಾವುದು ಇಲ್ಲ. ಸಾಧಿಸುವ ಛಲ ನಮ್ಮಲ್ಲಿರಬೇಕು ಎಂದು ಲೆಫ್ಟಿನೆಂಟ್ ಎಸ್.ಬಿ.ಚಳಗೇರಿ ಹೇಳಿದರು.

ಪಟ್ಟಣದ ವಿ.ಎಂ. ಎಸ್.ಆರ್.ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿಜಯ ಶಂಕ್ರಪ್ಪ ಬೆಳ್ಳಿಹಾಳವಾಣಿಜ್ಯಮಹಾವಿದ್ಯಾಲಯವು ತಾಲ್ಲೂಕಿನ ಚಿತ್ತವಾಡಗಿ ಗ್ರಾಮದಲ್ಲಿ ಹಮ್ಮಿಕೊಂಡಿರುವ ರಾಷ್ಟ್ರೀಯ ಸೇವಾ ಯೋಜನೆ ಘಟಕದ 2022-23ರ ವಾರ್ಷಿಕ ವಿಶೇಷ ಶಿಬಿರದ ಕಾರ್ಯಕ್ರಮದಲ್ಲಿ ಭಾನುವಾರ ಭಾಗವಹಿಸಿ ಅವರು ಮಾತನಾಡಿದರು.

ಎನ್‌ಸಿಸಿ ಮತ್ತು ಎನ್‌ಎಸ್‌ಎಸ್ ಚಟುವಟಿಕೆಗಳು ವಿದ್ಯಾರ್ಥಿಗಳ ವ್ಯಕ್ತಿತ್ವದ ಬೆಳವಣಿಗೆಗೆ ಪೂರಕ. ದುಡ್ಡಿನಿಂದ ಜ್ಞಾನ ಕೊಂಡುಕೊಳ್ಳಲು ಸಾಧ್ಯವಿಲ್ಲ. ಅಚಲವಾದ ಗುರಿ, ದಿಟ್ಟತನದ ಪ್ರಯತ್ನದಿಂದ ಬೆಟ್ಟದಂತಹ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎಂದರು.

ವಿ.ಎಂ.ಎಸ್.ಆರ್.ವಿ.ಪದವಿ ಪೂರ್ವ ಕಾಲೇಜಿನ ಪ್ರಚಾರ್ಯ ಎಚ್.ಎಸ್.ಬೋಳಿಶೆಟ್ಟರ ಮಾತನಾಡಿ, ವಿದ್ಯಾರ್ಥಿಗಳು ಆರೋಗ್ಯಕ್ಕೆ ಮೊದಲ ಆದ್ಯತೆ ನೀಡಿ. ಸದೃಢವಾದ ದೇಹ ಹೊಂದಿದ ವ್ಯಕ್ತಿ ಸದೃಢ ಮನಸ್ಸು ಹೊಂದಿರುತ್ತಾನೆ. ಇತ್ತೀಚಿನ ದಿನಗಳಲ್ಲಿ ಯುವಕ- ಯುವತಿಯರು ಜಂಕ್ ಫುಡ್‌ಗೆ ಆಕರ್ಷಿತರಾಗುತ್ತಿದ್ದಾರೆ. ಆಹಾರ ಪದ್ಧತಿಯಲ್ಲಿನ ಬದಲಾವಣೆಯಿಂದ ವಿವಿಧ ರೋಗಗಳಿಗೆ ತುತ್ತಾಗುತ್ತಿದ್ದು, ಈ ಬಗ್ಗೆ ಗಮನಹರಿಸಿ. ರಾಷ್ಟ್ರೀಯ ಸೇವಾ ಯೋಜನೆಯ ಮೂಲಕ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದ ಜನರಲ್ಲಿ ಆರೋಗ್ಯ, ಪರಿಸರದ ಪ್ರಜ್ಞೆ ಮೂಡಿಸುವ ಕಾರ್ಯಮಾಡಿ ಎಂದರು.

ಗುತ್ತಿಗೆದಾರ ಮಲ್ಲಣ್ಣ ಲೆಕ್ಕಿಹಾಳ ಮಾತನಾಡಿದರು.

ರಾಷ್ಟ್ರೀಯ ಸೇವಾ ಯೋಜನಾಧಿಕಾರಿ ಬಿ.ಎ.ಕಂಠಿ, ತಿಪ್ಪೇಸ್ವಾಮಿ ಡಿ.ಎಸ್, ಸಂಗಮೇಶ ಹೂಗಾರ, ಪರಸಪ್ಪ ವಡ್ಡರ, ನವೀನ ಪಾಟೀಲ, ಶಂಭುಗೌಡ ಪಾಟೀಲ ಇದ್ದರು.

ಹುನಗುಂದದ ವಿ.ಎಂ. ಎಸ್‌ಆರ್‌ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿಜಯ ಶಂಕ್ರಪ್ಪ ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ ತಾಲ್ಲೂಕಿನ ಚಿತ್ತವಾಡಗಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವಾರ್ಷಿಕ ವಿಶೇಷ ಶಿಬಿರದ ಕಾರ್ಯಕ್ರಮದಲ್ಲಿ ಲೆಫ್ಟಿನೆಂಟ್ ಎಸ್.ಬಿ.ಚಳಗೇರಿ ಮಾತನಾಡಿದರು

[redacted]

**News of the Event appeared in the Kannada Daily**

HUNGUND

Principal
Vijaya Mahantesh Krupaposhit
S.R.Vastrad Arts, Science and Vijay
Shankarappa Bellihal Commerce College
Hungund-587118 (Dist:Bagalkot-Karnataka)